ಏನಾದರೂ ಆಸ್ತಿ ಬಿಟ್ಟುಹೋಗಿದ್ದರೆ ಏನು ಗತಿ? ನೀವೆಲ್ಲ ಜಗಳವಾಡಿಕೊಂಡು ಕೋರ್ಟಿನ ಕಟ್ಟೆ ಏರಿಬಿಡುತ್ತಿದ್ದಿರಿ" ಎಂದು ಜಗಳವನ್ನು ತೇಲಿಸಿಬಿಡುತ್ತಿದ್ದರು. ಪರಮಹಂಸರು ಬಿಟ್ಟು ಹೋಗಿರುವ 'ಅಸ್ಥಿ'ಯೇ ದೊಡ್ಡ ಆಸ್ತಿಯೆಂದು ಅವರೆಲ್ಲ ಮನಗಂಡಿದ್ದರು. ಆ ಯುವಸಂನ್ಯಾಸಿಗಳೆಲ್ಲ ರಾಶಿರಾಶಿ ಪುಸ್ತಕಗಳನ್ನು ಗುಡ್ಡೆಹಾಕಿ ಓದುತ್ತಿದ್ದರು. ಅದನ್ನು ಕಂಡು ಅದ್ಭುತಾನಂದರು, "ಏನಪ್ಪಾ, ಯಾವುದೋ ದೊಡ್ಡ ಪರೀಕ್ಷೆಗೆ ಕುಳಿತವರ ಹಾಗೆ ತಲೆಕೆಡಿಸಿಕೊಳ್ಳುತ್ತಿದ್ದೀರಲ್ಲಾ" ಎನ್ನುತ್ತಿದ್ದರು.

ಸಂಕೋಚ, ಅಂಜಿಕೆಗಳು ಅವರನ್ನು ಮುಟ್ಟುತ್ತಿರಲಿಲ್ಲ. ಆತ್ಮಾರಾಮರಾದ ಅವರಿಗೆ ಏಕತಾನತೆಯ ನಿಯಮಗಳಿಗೆ, ಕಟ್ಟುಪ್ಪಾಣೆಗಳಿಗೆ ಒಗ್ಗಿಕೊಳ್ಳುವುದು ಸಾಧ್ಯವಿರಲಿಲ್ಲ. ಮಾನವೀಯ ಗುಣಗಳಿಂದ ಮೆರೆಯುತ್ತಿದ್ದ ಅವರು ತಮ್ಮ ದರ್ಶನಕ್ಕೆಂದು ಮಳೆಯಲ್ಲಿ ನೆಂದುಬಂದ ಭಕ್ತನಿಗೆ, ಒರೆಸಿಕೊಳ್ಳಲು ತಮ್ಮ ಕಾಷಾಯವಸ್ತ್ರವನ್ನೇ ಕೊಟ್ಟರು. ವಿವೇಕಾನಂದರೊಡನೆ ತೀರ್ಥಯಾತ್ರೆ ಮಾಡುವ ಕಾಲಕ್ಕೆ ಖೇತ್ರಿಯ ಮಹಾರಾಜ ಅಜಿತ್‌ಸಿಂಗರೊಡನೆ ಸಂಭಾಷಣೆ ಮಾಡಲೇಬೇಕಾದ ಅನಿವಾರ್ಯತೆಗೆ ಗುರಿಯಾಗಿಬಿಟ್ಟರು. ಆ ಹೊತ್ತಿನ ಅವರ ಸಂಭಾಷಣೆಯ ಪ್ರೌಢಿಮೆಯನ್ನು ಕಂಡವರು ಅದ್ಭುತಾನಂದರು ಅನಕ್ಷರಸ್ಥರು ಎಂದು ಹೇಳುವುದು ಸಾಧ್ಯವೇ ಇರಲಿಲ್ಲ.

**ಜೀವನಯಾತ್ರೆಗೆ ಮಂಗಳ**

ಅದ್ಭುತಾನಂದರು ೧೯೧೨ರಿಂದ ಎಂಟು ವರ್ಷ ಕೋಲ್ಕತಾ ತೊರೆದು ಕಾಶೀಕ್ಷೇತ್ರದಲ್ಲಿ ನೆಲೆಸಿಬಿಟ್ಟರು. ಶ್ರೀರಾಮಕೃಷ್ಣ ಅದ್ವೈತಾಶ್ರಮದಲ್ಲೂ ಇನ್ನಿತರ ಕಡೆಗಳಲ್ಲೂ ಅವರು ದಿನಗಳೆದರು. ತಪಶ್ಚರ್ಯೆ, ದೇಹದಂಡನೆ, ವೃದ್ಧಾಪ್ಯಗಳೇ ಕಾರಣವಾಗಿ, ಸಕ್ಕರೆಕಾಯಿಲೆಗೂ ಕಾಲಿನಲ್ಲುಂಟಾದ ಹುಣ್ಣಿಗೂ ತುತ್ತಾಗಿ ಸೊರಗಿಹೋದರು. ಹುಣ್ಣಿಗೆ ಶಸ್ತ್ರಚಿಕಿತ್ಸೆಯಾದರೂ ಪ್ರಯೋಜನವಾಗದೆ ೨೪-೪-೧೯೨೦ರಲ್ಲಿ ಮೋಕ್ಷವೈದಿದರು.

"ನಮ್ಮಲ್ಲಿ ಅನೇಕರು ಭಗವಂತನ ಸಾಕ್ಷಾತ್ಕಾರಕ್ಕಿಂತ ಮೊದಲು ಬೌದ್ಧಿಕ ಜ್ಞಾನದ ಕೆಸರುನೀರನ್ನು ಹಾಯ್ದು ಬಂದೆವು. ಆದರೆ ಲಾಟು ಮಹಾರಾಜ್ ಮಾತ್ರ ಸಮುದ್ರೋಲ್ಲಂಘನ ಮಾಡಿದ ಆಂಜನೇಯನಂತೆ ಅದನ್ನು ಹಾರಿ ಪಾರಾಗಿ ಬಂದುಬಿಟ್ಟರು. ಪ್ರಪಂಚದ ಕೊಳಕನ್ನು ಹತ್ತಿಸಿಕೊಳ್ಳದೆ ಭಗವಂತನ ಭಾವದಲ್ಲಿ ಹೇಗೆ ಬದುಕಬಹುದೆಂಬುದಕ್ಕೆ ಅವರೊಂದು ಆದರ್ಶವಾಗಿದ್ದಾರೆ" (*ದೇವರೊಡನೆ ಬಾಳಿದವರು*, ಪು. ೪೬೩) ಎಂಬ ಸ್ವಾಮಿ ತುರೀಯಾನಂದರ ಮಾತುಗಳನ್ನು ಈ ಸಂದರ್ಭದಲ್ಲಿ ನೆನೆಯಬೇಕು.

**ಸಹಜೋಪದೇಶ**

೧) ಪರಮಾತ್ಮನನ್ನು ಅಚಲವಾಗಿ ನಂಬಿ ಕಾರ್ಯಗಳಲ್ಲಿ ತೊಡಗಿದರೆ ನಮಗೆ ಯಶಸ್ಸು ಲಭಿಸುವುದಲ್ಲದೆ ಕಠಿಣವಾದ ಕಾರ್ಯಗಳೂ ಹಗುರವಾಗಿಬಿಡುತ್ತವೆ.

೨) ನಮ್ಮ ನಿತ್ಯಜೀವನವನ್ನು ಕುರಿತು "ಅಯ್ಯೋ, ಇದೊಂದು ಹೊರೆ" ಎಂದು ಜುಗುಪ್ಸೆಪಡಬಾರದು. ಗಂಗೆಯಲ್ಲಿ ಮುಳುಗಿದಾಗ ಶರೀರವು ಹಗುರವಾಗಿಬಿಡುವಂತೆ, ಪರಮಾತ್ಮನ ಸ್ಮರಣೆಯಿದ್ದರೆ ಬದುಕೂ ಹಗುರವಾಗಿ, ಲೋಕವೇ ಒಂದು ಕ್ರೀಡಾಂಗಣವಾಗಿಬಿಡುತ್ತದೆ.

೩) ಸಂಸಾರದಲ್ಲಿರುತ್ತ ಪರನಿಂದೆ, ಪರದೋಷದರ್ಶನ ಮಾಡುವುದಕ್ಕಿಂತ ಆ ಸಮಯವನ್ನು ನಿದ್ರೆಯಲ್ಲಿ ಕಳೆದರೂ ತಪ್ಪಿಲ್ಲ. ಅನ್ಯರ ಗುಣದರ್ಶನಕ್ಕೆ ಮನಸ್ಸು ಕೊಟ್ಟರೆ ದೋಷಗಳು ಕಣ್ಣಿಗೆ ಬೀಳುವುದೇ ಇಲ್ಲ.

೪) ಸದ್ಗುರುವು ನಿತ್ಯವೂ ಶಿಷ್ಯರ ಮನಸ್ಸಿನ ಕಸವನ್ನು ಗುಡಿಸಲಾರ. ಒಮ್ಮೆ ಗುಡಿಸಿದ ಬಳಿಕ ಶಿಷ್ಯರೇ ಅದನ್ನು ಶುದ್ಧವಾಗಿಟ್ಟುಕೊಳ್ಳಬೇಕು. ಗ್ರಾಮಸ್ಥರು ತೇರೆಳೆಯಲು ಹೋದಾಗ ಮಕ್ಕಳನ್ನು ಹೆಗಲಮೇಲೆ ಕೂರಿಸಿಕೊಂಡು 'ಮಾಮಿ ನೋಡು ಮಾಮಿ' ಎಂದು ಕೈಮಾಡಿ ತೋರಿಸುತ್ತಾರೆ. ಹಾಗೆ ಗುರುವು ತನ್ನ ಶಿಷ್ಯರನ್ನು ಹೆಗಲಮೇಲೆ ಹೊತ್ತು ದೇವರ ಬಳಿಗೊಯ್ಯಲಾರ.

೫) ನೀವೆಂದೂ ನೋಡದ ಒಂದು ಕಂಪನಿಯ ಮ್ಯಾನೇಜರನಿಗೆ ನೀವು ಕೆಲಸಕ್ಕಾಗಿ ಅರ್ಜಿಯನ್ನು ಕಳುಹಿಸುವುದಿಲ್ಲವೇ? ಅದೇ ರೀತಿ, ನೀವು ದೇವರಿಗೂ ಒಂದು ಅರ್ಜಿಯನ್ನು ಹಾಕಿಕೊಳ್ಳಬಹುದು. ಆದರೆ ಈ ಅರ್ಜಿಯನ್ನು ಕಾಗದದ ಮೇಲೆ ಬರೆಯುವಂತಿಲ್ಲ. ಮನಸ್ಸಿನ ಪುಟಗಳ ಮೇಲೆ ಬರೆಯಬೇಕು. "ಹೇ ದೇವ, ನಾನು ನಿನ್ನ ನಾಮವನ್ನು ಮರೆಯದಂತಾಗಲಿ. ನಿನ್ನಲ್ಲಿ ಶರಣಾಗಿದ್ದೇನೆ. ನಿನ್ನ ಸೇವೆಗೆ ಅನುವು ಮಾಡಿಕೊಟ್ಟು, ನನ್ನ ಸಂಶಯ, ಅಹಂಕಾರಗಳನ್ನು ದೂರಮಾಡು. ನೀನೇ ನನ್ನ ಸರ್ವಸ್ವ. ನಿನ್ನ ಮಾಯೆಯಲ್ಲಿ ನನ್ನನ್ನು ಸಿಲುಕಿಸಬೇಡ. ಹೇ ದೊರೆಯೇ, ನಿನ್ನನ್ನು ನಾನು ನೋಡಿಲ್ಲ. ನಿನ್ನ ಹೆಸರನ್ನು ಮಾತ್ರ ಕೇಳಿರುವೆ. ನನ್ನನ್ನು ದಯವಿಟ್ಟು ಒಪ್ಪಿಸಿಕೋ" ಎಂದು ಅನುದಿನವೂ ಪ್ರಾರ್ಥಿಸಬೇಕು.

ವಿದ್ಯಾರ್ಥಿಪ್ರಭ

# ಅದ್ವಿತೀಯ ಮಹಿಳೆ ಮೇರಿ ಕ್ಯೂರಿ



ಡಾ. ರಾ. ಲ. ಜಗದೀಶ್

ವಿಶ್ವ ಕಂಡ ಅತ್ಯಂತ ಉದಾತ್ತ ಮತ್ತು ನಿಸ್ಪೃಹ ವಿಜ್ಞಾನಿಗಳಲ್ಲಿ ಒಬ್ಬಳು ಮೇರಿ ಕ್ಯೂರಿ. ಅಕೆಯದು ಧ್ಯೇಯಕ್ಕೆ ಸಮರ್ಪಿತವಾದ ಪವಿತ್ರ ಜೀವನ. ಇದರ ಅಧ್ಯಯನ ವಿದ್ಯಾರ್ಥಿಗಳಲ್ಲಿ ಸ್ಫೂರ್ತಿಯನ್ನು ತುಂಬುತ್ತದೆ. ಅದಲ್ಲದೆ ಈಕೆ ೧೯೧೧ರಲ್ಲಿ ಕೈಕೊಂಡ ರೇಡಿಯಂ ಮೇಲಿನ ಸಂಶೋಧನೆಯ ಅಂಗವಾಗಿ ೨೦೧೧ನೇ ವರ್ಷವನ್ನು 'ಅಂತಾರಾಷ್ಟ್ರೀಯ ರಸಾಯನಶಾಸ್ತ್ರ' ವರ್ಷವನ್ನಾಗಿ ಆಚರಿಸಲಾಗುತ್ತಿದೆ. ಮೇರಿ ಕ್ಯೂರಿಯ ಕಥೆಯನ್ನು ಹೃದಯಂಗಮವಾಗಿ ನಮಗೆ ತಿಳಿಸಿಕೊಟ್ಟಿರುವ ಲೇಖಕರು ಮಂಡ್ಯ ಜಿಲ್ಲೆಯ ತೂಬಿನಕೆರೆಯಲ್ಲಿರುವ ಮೈಸೂರು ವಿಶ್ವವಿದ್ಯಾನಿಲಯದ ಸರ್. ಎಂ. ವಿಶ್ವೇಶ್ವರಯ್ಯ ಸ್ನಾತಕೋತ್ತರ ಕೇಂದ್ರದ ಪಾಲಿಮರ್ ವಿಜ್ಞಾನ ವಿಭಾಗದಲ್ಲಿ ಉಪನ್ಯಾಸಕರಾಗಿದ್ದಾರೆ.

## ವಿಶ್ವ ಕಂಡ ಅಪೂರ್ವ ವಿಜ್ಞಾನಿ

ಒಬ್ಬ ಜವಾಬ್ದಾರಿಯುತ ಮಗಳಾಗಿ, ತಾಯಿಯಾಗಿ, ಮಡದಿಯಾಗಿ ಸಮಾಜದ ಒಳಿತಿಗಾಗಿಯೇ ಶ್ರಮಿಸಿದ ಅತ್ಯಂತ ಸುಸಂಸ್ಕೃತ ಮಹಿಳೆಯಾದ ಮದಾಂ ಮೇರಿ ಕ್ಯೂರಿಯ ಬಗ್ಗೆ ಎಷ್ಟು ಹೇಳಿದರೂ ಕಡಮೆಯೇ. ದೂರದೃಷ್ಟಿ ಹೊಂದಿದ್ದ ವಿಜ್ಞಾನಿಯಾಗಿ, ಐನ್‌ಸ್ಟೈನ್‌ರವರಿಂದಲೂ ಹೊಗಳಿಕೆಗೆ ಪಾತ್ರವಾಗಿದ್ದ ಆಕೆಯ ಜೀವನಗಾಥೆ ನಿಜಕ್ಕೂ ಅವಿಸ್ಮರಣೀಯ. ವಿಜ್ಞಾನವನ್ನೇ ಜೀವನದ ಧ್ಯೇಯವಾಗಿರಿಸಿಕೊಂಡಿದ್ದ ಮೇರಿ ಕ್ಯೂರಿ ವಿಶ್ವದಾದ್ಯಂತ ಖ್ಯಾತಿಗೆ ಪಾತ್ರರಾದಳು. ಫ್ರಾನ್ಸಿನ ಅಧ್ಯಕ್ಷರಾದ ಮಿಥೆರಾ ತಮ್ಮ ೧೪ ವರುಷಗಳ ಆಳ್ವಿಕೆಯ ಕೊನೆಯ ಭಾಷಣವೊಂದರಲ್ಲಿ, ಮೇರಿ ಕ್ಯೂರಿ ಒಬ್ಬ ವಲಸೆಯವಳಾದರೂ, ಫ್ರಾನ್ಸ್‌ನ ಘನತೆಯನ್ನು ವೈಜ್ಞಾನಿಕ ಪ್ರಪಂಚದಲ್ಲಿ ಎತ್ತಿ ಹಿಡಿದಿದ್ದರಿಂದ, ಆಕೆಯ ಪಾರ್ಥಿವ ಶರೀರವನ್ನು ದೇಶದ ಅತ್ಯಂತ ಗೌರವಾನ್ವಿತ ಪಾನ್‌ಥಿಯಾನ್ ಚರ್ಚ್‌ನಲ್ಲಿ ಸಮಾಧಿಮಾಡುವುದಾಗಿ ಘೋಷಣೆಯನ್ನು ಮಾಡಿದರು. ಈ ಘೋಷಣೆಯಾದ ತರುವಾಯ, ೧೯೯೫ರ ಏಪ್ರಿಲ್ ೨೦ರಂದು, ಮೇರಿ ಹಾಗೂ ಆಕೆಯ ಪತಿ ಪಿಯರಿ – ಇವರಿಬ್ಬರ ಅದ್ವಿತೀಯ ಸಂಶೋಧನೆಗಳನ್ನು ಮತ್ತೊಮ್ಮೆ ಮೆಲುಕು ಹಾಕುವ ಸಂದರ್ಭ ವೈಜ್ಞಾನಿಕ ಲೋಕಕ್ಕೆ ಒದಗಿ ಬಂದಿತು. ಆ ದಿನ ಇವರಿಬ್ಬರ ಪಾರ್ಥಿವ ಶರೀರಗಳನ್ನೂ ಮೊದಲು ಸಮಾಧಿ ಮಾಡಿದ್ದ ಪ್ಯಾರಿಸ್‌ನ ಹೊರವಲಯದಿಂದ, ವಿಶ್ವದಲ್ಲೇ ಅತ್ಯಂತ ಗೌರವಾನ್ವಿತ ಚರ್ಚ್ ಆದ ಪಾನ್‌ಥಿಯಾನ್‌ನಲ್ಲಿ ಸಮಾಧಿ ಮಾಡಲಾಯಿತು. ಅಲ್ಲಿ ಇದುವರೆಗೆ ಸಮಾಧಿಯಾಗಿದ್ದ ಏಕೈಕ ಮಹಿಳೆಯೆಂದರೆ ಸೋಫಿ. ಅವಳಿಗೆ ಇದ್ದ ಒಂದೇ ಅರ್ಹತೆ ಎಂದರೆ, ಪ್ರಸಿದ್ಧ ರಸಾಯನಶಾಸ್ತ್ರಜ್ಞನೊಬ್ಬನ ಹೆಂಡತಿ ಎನ್ನುವುದು.

ವಿಜ್ಞಾನದ ಅಭಿವೃದ್ಧಿಗೆ ಅತ್ಯಂತ ಆಸಕ್ತಿಪೂರ್ಣವಾಗಿ ಕೆಲಸ ಮಾಡಿ ಎರಡು ಬಾರಿ ನೊಬೆಲ್ ಪಾರಿತೋಷಕಕ್ಕೆ ಅರ್ಹಳಾದ ಅಪೂರ್ವ ವ್ಯಕ್ತಿ ಮೇರಿ ಕ್ಯೂರಿ. ಮೊದಲು ಭೌತಶಾಸ್ತ್ರದಲ್ಲಿ, ಅನಂತರ ರಸಾಯನಶಾಸ್ತ್ರದಲ್ಲಿ ನೊಬೆಲ್ ಪ್ರಶಸ್ತಿಗೆ ಪಾತ್ರಳಾದ ಮೇರಿ ಕ್ಯೂರಿ ವಿಶ್ವ ಕಂಡ ಅತ್ಯುತ್ತಮ ಸಂಶೋಧಕಿಯಾಗಿದ್ದಾರೆ. ಅಂದಿನ ಆಕೆಯ ಸಂಶೋಧನೆ ಇಂದಿನ ನವ ವೈಜ್ಞಾನಿಕ ಜಗತ್ತಿಗೆ ತಳಹದಿಯಾಯಿತು ಎಂದರೆ ತಪ್ಪಾಗಲಾರದು. ಆಗಿನ ಕಾಲದ ಕಠಿಣ ರಾಜಕೀಯ ಪರಿಸ್ಥಿತಿಗಳು ಯಾವುದಕ್ಕೂ ಸ್ಫೂರ್ತಿ ನೀಡುತ್ತಿರಲಿಲ್ಲ. ಅದಲ್ಲದೆ, ಜಗತ್ತಿನಾದ್ಯಂತ ಯುದ್ಧದ ಕಾರ್ಮೋಡ ಕವಿದಿತ್ತು. ಅಂಥ ಕಠಿಣ ಪರಿಸ್ಥಿತಿಯನ್ನು ಎದುರಿಸಿ, ಜೀವನದಲ್ಲಿ ಗಮನಾರ್ಹವಾದುದನ್ನು ಸಾಧಿಸಿದ ದಿಟ್ಟ ಮಹಿಳೆ ಮೇರಿ ಕ್ಯೂರಿ.

ಆಕೆಯ ಜೀವನವೇ ಒಂದು ಯಶೋಗಾಥೆ. ಪ್ರತಿಯೊಬ್ಬನೂ ಮೆಚ್ಚುವ ವ್ಯಕ್ತಿತ್ವ ಆಕೆಯದು. ಹೀಗಾಗಿ ಮೇರಿ ಮಾಡಿದ ಸಂಶೋಧನೆಗಳು ವೈಜ್ಞಾನಿಕ ಜಗತ್ತಿನಲ್ಲಿ ವ್ಯಾಪಕ ಪ್ರಚಾರ ಪಡೆದುಕೊಂಡವು. ಪುರುಷರದ್ದೇ ಮೇಲುಗೈ ಆಗಿದ್ದ ವೈಜ್ಞಾನಿಕ ಸಂಶೋಧನಾ ಕ್ಷೇತ್ರವನ್ನು ಆರಿಸಿಕೊಂಡು, ಅದಕ್ಕಾಗಿಯೇ ತನ್ನ ಜೀವನವನ್ನು ಮುಡುಪಾಗಿಟ್ಟದ್ದು, ತನ್ನ ಮನೆಮಂದಿಯನ್ನೆಲ್ಲ ಅದರಲ್ಲೇ ತೊಡಗಿಸಿಕೊಂಡಿದ್ದು ಮೇರಿ ಸಾಧಿಸಿದ ಒಂದು ಅದ್ಭುತವೆಂದೇ ಹೇಳಬೇಕು. ಆಕೆಯ ಮಗಳಿಗೂ ನೊಬೆಲ್ ಪ್ರಶಸ್ತಿ ದೊರಕಿರುವುದು ಗಮನಾರ್ಹ.

ಯುರೇನಿಯಂ ಮೂಲವಸ್ತುವು ಕೆಲವು ಕಿರಣಗಳನ್ನು ಬಿಡುಗಡೆ ಮಾಡುತ್ತ, ಛಾಯಾಚಿತ್ರ ಹಲಗೆಗಳ ಮೇಲೆ (Photographic plates) ಪರಿಣಾಮ ಬೀರುವುದಲ್ಲದೆ, ಗಾಳಿಯಲ್ಲಿ ವಿದ್ಯುತ್ ಹರಿಯುವಂತೆಯೂ ಮಾಡುತ್ತಿದ್ದುದನ್ನು ೧೮೯೬ ರಲ್ಲಿ ಬೆಕ್ವೆರಲ್ ಎಂಬ ವಿಜ್ಞಾನಿಯು ಗಮನಿಸಿದನು. ಈ ವಿದ್ಯಮಾನಕ್ಕೆ 'ವಿಕಿರಣಶೀಲತೆ' (Radioactivity) ಎಂದು ಹೆಸರಾಯಿತು. ಇದಕ್ಕೆ ಕಾರಣವಾಗುವ ವಸ್ತುಗಳನ್ನು ವಿಕಿರಣಶೀಲ ವಸ್ತುಗಳೆಂದು (Radioactive) ವಿಜ್ಞಾನಿಗಳು ಕರೆದರು. ಕೆಲಕಾಲದ ತರುವಾಯ ಥೋರಿಯಂ ಎಂಬ ಧಾತುವನ್ನು ಬರ್ಜಿಲಿಯಸ್ ಎಂಬ ವಿಜ್ಞಾನಿ ಕಂಡುಹಿಡಿದನಲ್ಲದೆ, ಇದು ಕೂಡ ವಿಕಿರಣಶೀಲ ಗುಣಲಕ್ಷಣ ಹೊಂದಿದೆ ಎಂದು ಸಾಬೀತುಪಡಿಸಿದನು.

ಈ ಗುಣಲಕ್ಷಣಗಳ ಬಗೆಗೆ ಹೆಚ್ಚು ಪರಿಣಾಮಕಾರಿಯಾಗಿ ಸಂಶೋಧನೆ ಮಾಡಿದ ಮೇರಿ ಕ್ಯೂರಿ ಹಾಗೂ ಬೆಕ್ವೆರಲ್ ಅವರಿಗೆ ೧೯೦೩ರಲ್ಲಿ ಜಂಟಿಯಾಗಿ ಭೌತಶಾಸ್ತ್ರ ವಿಭಾಗದ ನೊಬೆಲ್ ಪಾರಿತೋಷಕ ದೊರೆಯಿತು. ವಿಕಿರಣಶೀಲ ವಸ್ತುಗಳಾದ ಯುರೇನಿಯಂ ಹಾಗು ಥೋರಿಯಂಗಳ ಬಗೆಗಿನ ಸಂಶೋಧನೆಯನ್ನು ಕೈಗೊಂಡ ಅವಧಿಯಲ್ಲಿ, ವಿಕಿರಣ ಶಕ್ತಿ ನೇರವಾಗಿ ಮೂಲವಸ್ತುವಿನಲ್ಲಿರುವ ವಿಕಿರಣಶೀಲ ಅಂಶಗಳ ಪ್ರಮಾಣವನ್ನು ಅವಲಂಬಿಸುತ್ತದೆ ಎಂದು ಮೇರಿ ಪ್ರತಿಪಾದಿಸಿದಳು. ಈ ಸಂಶೋಧನೆಗಾಗಿ ಆಕೆಗೆ ೧೯೧೧ರ ರಸಾಯನಶಾಸ್ತ್ರ ನೊಬೆಲ್ ಪಾರಿತೋಷಕ ಕೂಡ ದೊರೆಯಿತು.

### ಕಠಿಣ ಪರಿಸ್ಥಿತಿಗಳ ನಡುವೆ

ಮೇರಿಯ ಜನನ ಪೋಲೆಂಡಿನ ರಾಜಧಾನಿ ವಾರ್ಸಾದಲ್ಲಿ ನವಂಬರ್ ೭, ೧೮೬೭ರಲ್ಲಿ ಆಯಿತು. ಆಗ ಪೋಲೆಂಡ್ ದೇಶವು ಆಸ್ಟ್ರಿಯ, ಪ್ರಷ್ಯ ಮತ್ತು ಜ಼ಾರಿಸ್ಟ್ ರಶಿಯಾಗಳಲ್ಲಿ ಹರಿದು ಹಂಚಿಹೋಗಿತ್ತು. ಮೇರಿ ಹುಟ್ಟುವ ಹೊತ್ತಿಗಾಗಲೇ ಪರಕೀಯರ ಆಳ್ವಿಕೆ ಪ್ರಾರಂಭವಾಗಿ ಹತ್ತು ವರುಷ ಉರುಳಿತ್ತು. ವಾರ್ಸಾ ನಗರವು ಜ಼ಾರ್‌ನ ಒಡೆತನದಲ್ಲಿತ್ತು. ಪೋಲೆಂಡ್ ರಾಷ್ಟ್ರೀಯತೆಯನ್ನು ಅಲ್ಲಿನ ಜನರ ಮನಸ್ಸಿನಿಂದ ತೊಡೆದುಹಾಕುವುದೇ ಆತನ ಆಳ್ವಿಕೆಯ ಗುರಿಯಾಗಿದ್ದಿತು. ಆದರೆ ಪೋಲಿಷ್ ದೇಶಾಭಿಮಾನಿಗಳು ಮಾತೃಭೂಮಿಯನ್ನು ತಮ್ಮ ತೆಕ್ಕೆಗೆ ಮತ್ತೆ ತೆಗೆದುಕೊಳ್ಳಲು ಹರಸಾಹಸ ಮಾಡುತ್ತಿದ್ದರು.

ಮೇರಿಯ ಪೋಷಕರಿಬ್ಬರೂ ಶಿಕ್ಷಕರು; ಅವರು ಸ್ಥಳೀಯ ಶಾಲೆಗಳಲ್ಲಿ ಕೆಲಸಮಾಡುತ್ತಿದ್ದರು. ಐದನೆಯ ಮಗುವಾಗಿ ಮೇರಿ ಜನಿಸಿದಾಗ ತಾಯಿಯು ಶಾಲೆಯ ಮುಖ್ಯಸ್ಥೆಯ ಪದವಿಗೆ ರಾಜೀನಾಮೆ ಕೊಟ್ಟು, ಮಕ್ಕಳ ಲಾಲನೆ ಪಾಲನೆಗಳಲ್ಲಿ ತೊಡಗಿದಳು. ತಂದೆಯ ರಾಷ್ಟ್ರಾಭಿಮಾನದ ಸಲುವಾಗಿ ಅವರನ್ನು ಅಧಿಕಾರಿಗಳು ಕೆಲಸದಿಂದ ವಜಾ ಮಾಡಿಬಿಟ್ಟರು. ಇದರಿಂದಾಗಿ ಸಂಸಾರನಿರ್ವಹಣೆ ಕಷ್ಟವಾಗಿ ಇಡೀ ಕುಟುಂಬ ಆರ್ಥಿಕ ಸಂಕಷ್ಟಕ್ಕೆ ಸಿಲುಕಿತು. ಇದಕ್ಕೆ ಪರಿಹಾರವಾಗಿ, ಮನೆಯೂಟದ ವಿದ್ಯಾರ್ಥಿಗಳನ್ನು ದಂಪತಿಗಳು ಬರಮಾಡಿಕೊಳ್ಳತೊಡಗಿದರು. ಈ ಮಧ್ಯೆ ಹಿರಿಯ ಸಹೋದರಿ, ಊಟಕ್ಕೆ ಬಂದವನೊಬ್ಬನ ಕಾಯಿಲೆಯಿಂದ ಸೋಂಕಿತಳಾಗಿ ಸಾವನ್ನಪ್ಪಿದಳು. ಸತತವಾಗಿ ನಾಲ್ಕು ವರುಷಗಳಿಂದ ಕ್ಷಯರೋಗದಿಂದ ಬಳಲುತ್ತಿದ್ದ ತಾಯಿ ತನ್ನ ೪೨ನೆಯ ವಯಸ್ಸಿನಲ್ಲಿಯೇ ತೀರಿಹೋದಳು. ಒಂಬತ್ತನೆಯ ವಯಸ್ಸಿನ ಮೇರಿಗೆ ಈ ಎಲ್ಲ ಘಟನೆಗಳು, ಮುಂದಿನ ಜೀವನದಲ್ಲಿ ಕಷ್ಟಗಳನ್ನು ಎದುರಿಸುವ ಒಂದು ಅದ್ಭುತಶಕ್ತಿಯನ್ನು ನೀಡಿದವು. ತಾಯಿಯ ಸಾವು ಅವಳನ್ನು ಧೃತಿಗೆಡಿಸಿದರೂ ಎದೆಗುಂದದೆ ಕುಟುಂಬಕ್ಕೆ ಹೆಗಲುಕೊಟ್ಟಳು.

ಸ್ಥಳೀಯ ಶಾಲೆಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಾಡಿದ ಮೇರಿ ಪ್ರಾಥಮಿಕ ವೈಜ್ಞಾನಿಕ ಜ್ಞಾನ ಹಾಗೂ ತರಬೇತಿಯನ್ನು ತನ್ನ ತಂದೆಯಿಂದ ಪಡೆದಳು. ಬೌದ್ಧಿಕ ಹಾಗೂ ಭಾವನಾತ್ಮಕ ಶಿಕ್ಷಣದ ತರಬೇತಿಯನ್ನು ಕೂಡ ತಂದೆಯೇ ನೀಡಿದರು. ಇದಲ್ಲದೆ ಆಕೆಯ ತಂದೆ ತಾನು ಭೌತಶಾಸ್ತ್ರ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದಾಗ ಉಪಯೋಗಿಸುತ್ತಿದ್ದ ವೈಜ್ಞಾನಿಕ ಸಲಕರಣೆಗಳ ಬಗೆಗೂ ಹೆಚ್ಚು ಜ್ಞಾನ ನೀಡಿದರು. ಏಕೆಂದರೆ ಶಾಲೆಗಳಲ್ಲಿ ಆ ವೇಳೆಗೆ ರಷ್ಯನ್ನರು ಪ್ರಾಯೋಗಿಕ ವಿವರಣೆಗಳ ಪಾಠವನ್ನೂ ನಿಷೇಧಿಸಿದ್ದರು. ಪೋಲೆಂಡನ್ನು ಆಕ್ರಮಿಸಿದ್ದ ರಷ್ಯಾ ದೇಶದವರು, ಅಲ್ಲಿನ ನಾಗರಿಕರಿಗೆ ಹೀಗೆ ಹಲವಾರು ರೀತಿಯ ತೊಂದರೆ ಕೊಡುತ್ತಿದ್ದರು. ಪೋಲಿಷ್ ಭಾಷೆಯನ್ನು ಕಲಿಸುತ್ತಿದ್ದರೆಂದು ಅವರ ತಂದೆಯನ್ನು ಶಿಕ್ಷೆಗೆ ಗುರಿಪಡಿಸಲಾಗಿತ್ತು. ವಿದ್ಯಾರ್ಥಿ ಕ್ರಾಂತಿಕೂಟದ ಸದಸ್ಯೆಯಾಗಿದ್ದ ಮೇರಿ ಅದರ ಅಪಾಯ ಅರಿತು, ಆ ಸಂಘಟನೆಯನ್ನು ತೊರೆದಳು.

ಐದು ಜನ ಮಕ್ಕಳಲ್ಲಿ ಕಿರಿಯವಳಾಗಿದ್ದ ಮೇರಿ, ಚಿಕ್ಕಂದಿನಲ್ಲಿ ತನ್ನ ತಂದೆಯವರು ತಮಗೆ ಬರುತ್ತಿದ್ದ ಅಲ್ಪ ಆದಾಯದಲ್ಲಿ ಮನೆಯ ಖರ್ಚನ್ನು ಸರಿದೂಗಿಸಲು ಹೆಣಗಾಡುತ್ತಿದ್ದುದನ್ನು ಅರಿತುಕೊಂಡಳು. ಊರಿನ ಸಮೀಪದಲ್ಲಿದ್ದ ಜಮೀನ್ದಾರನೊಬ್ಬನ ಮನೆಯಲ್ಲಿ ಪಾಠ ಹೇಳುತ್ತ ಹಣ ಸಂಪಾದಿಸತೊಡಗಿದಳು. ಐದು ವರುಷಗಳ ಕಾಲ ಆ ಕೆಲಸ ಮಾಡಿ, ದುಡಿದ ಹಣವನ್ನು ತಂದೆಯವರಿಗೆ ಕಳುಹಿಸಿ, ಮನೆಯ ಆರ್ಥಿಕ ಸಮಸ್ಯೆಯನ್ನು ನೀಗುವುದರಲ್ಲಿ ಸ್ವಲ್ಪ ಮಟ್ಟಿಗೆ ಯಶಸ್ವಿಯಾದಳು. ಅಲ್ಲದೆ ಪ್ಯಾರಿಸ್‌ನಲ್ಲಿ ವೈದ್ಯಕೀಯ ಅಧ್ಯಯನದಲ್ಲಿ ತೊಡಗಿದ್ದ ಸಹೋದರಿ ಬ್ರೊನ್ಯಾಳಿಗೂ ಮೇರಿ ಸಹಾಯ ಮಾಡಿದಳು. ಈ ಮನೆಪಾಠ ಮೇರಿಗೆ ಅತ್ಯಂತ ಖುಷಿ ಕೊಡುವ ಕೆಲಸವಾಗಿದ್ದಿತು. ಅತೀವ ಆರ್ಥಿಕಸಂಕಷ್ಟದಿಂದ